

# ಪರೀಕ್ಷೆ: ಬೇಡ ಭಯ

■ **ಸಿದ್ದಯ್ಯ ಹಿರೇಮಠ**

ಕಲೆ: ಸಂತೋಷ್ ಸಸಿಹಿತ್ಲು

ಹೆದರದೆ ಬೆದರದೆ ಕನಲದೆ ಕುಗ್ಗದೆ
ಬರೆದರಾಯಿತು ಪರೀಕ್ಷೆ
ವರ್ಷದ ಓದಿಗೆ ಹರ್ಷದ ಹೊನಲಿಗೆ
ಶುರುವಾಗಲಿದೆ ಈ ಸಮೀಕ್ಷೆ
ಪುಸ್ತಕ– ಮಸ್ತಕ ಜೊತೆಜೊತೆಯಲ್ಲಿ
ಓದುವ ಜೀವಕೆ ಹುರುಪಿಹುದಿಲ್ಲಿ
ಅಂಕವ ಪಡೆಯುವ ಬಿಂಕದ ಆಟಕೆ
ಮನಸಲಿ ತುಂಬಲಿ ಹುಮ್ಮಸ್ಸು
ಸುಸ್ತು ಆದರೂ ಮಸ್ತು ಕಾಣುತ
ಮೂಡಲಿ ಮನದಲಿ ತೇಜಸ್ಸು
ನಾಳಿನ ಚಿಂತೆಯ ದೂರಕೆ ಇರಿಸಿ
ದುಡ್ಡು ಗಳಿಸುವ ದುರಾಸೆಯ ಸರಿಸಿ
ಅವರು ಬರೆದರು ಇವರು ಬಿದ್ದರು
ನಾವಾಗೋಣ ಸವಾಲನು ಗೆದ್ದವರು
ಪ್ರಶ್ನೆಯ ಪತ್ರಿಕೆ ಹೆಂಗೇ ಇರಲಿ
ಸೋರಿಕೆ ಗೀರಿಕೆ ಏನೇ ಆಗಲಿ
ಗುರುವಿನ ಅಭಯದ ನಂಬಿಕೆಯಲಿ
ಉತ್ತರ ಬರೆಯೋಣ ಹುರುಪಿನಲಿ
ವರ್ಷದ ಓದಿಗೆ ಮೂರೇ ತಾಸು
ಮುಂದಿನ ಓದಿಗೆ ಆಗೋಣ ಪಾಸು ■

## ಕುಂಚ ಪ್ರಪಂಚ



ಸಮನ್ವಿತಾ ಮಹೇಶ್
3ನೇ ತರಗತಿ, ಜ್ಞಾನಬೋಧಿನಿ ಹಿರಿಯ ಪ್ರಾಥಮಿಕ ಶಾಲೆ, ಬೆಂಗಳೂರು





ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
ವಿಳಾಸ: **editorsu@sudha.co.in**



ಆದ್ಯಾ ತಾಮ್ರಪರ್ಣಿ
5ನೇ ತರಗತಿ, ಮಾನಸ ಸರೋವರ ಪುಷ್ಕರಣಿ ವಿದ್ಯಾಶ್ರಮ, ಮೈಸೂರು